**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆಃ 126/2024**

**ಸಾಕ್ಷಿಯನ್ನು ದಿಃ 18.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ. LKJ ವಕೀಲರಿಂದಃ**

ನನ್ನ ತಂದೆಗೆ 6 ಎಕರೆ ಜಮೀನು ಇದೆ. ನನ್ನ ತಾತನ ಹೆಸರಿನಲ್ಲಿ 2 ಎಕರೆ ಜಮೀನು ಇದೆ. ನಾವು ಒಟ್ಟು 6 ಜನ ಮಕ್ಕಳು. ನನ್ನ ತಂದೆಗೆ ಒಟ್ಟು ಇಬ್ಬರು ಗಂಡು ಮಕ್ಕಳು ಮತ್ತು 3 ಜನ ಸಹೋದರರಿದ್ದಾರೆ. ಮೇಲೆ ಹೇಳಿದ 8 ಎಕರೆ ಜಮೀನು ನನ್ನ ತಂದೆಯ ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿ. ನಾನು ಹುಣಸೂರಿನಲ್ಲಿ ವಾಸ ಮಾಡುತ್ತಿರುವ ಕಾರಣ ಸದರಿ ಜಮೀನುಗಳಲ್ಲಿ

ನಾನು ವ್ಯವಸಾಯ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು 2ವರೆ ಎಕರೆಯಲ್ಲಿ ವ್ಯವಸಾಯ ಮಾಡುತ್ತೇನೆ, ಅಲ್ಲದೇ 6 ಎಕರೆ ಬೇರೆ ಜಮೀನು ಮಾಡುತ್ತಿದ್ದೇನೆ. ನನ್ನ ತಾತ ಮತ್ತು ತಂದೆಗೆ ಒಟ್ಟು 8 ಎಕರೆ ಜಮೀನು ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸುತ್ತೇನೆ. 6 ಎಕರೆ ಜಮೀನು ಲೀಸ್ ಗೆ ಹಾಕಿಕೊಂಡ ಬಗ್ಗೆ ದಾಖಲೆ ಹಾಜರುಪಡಿಸುತ್ತಿರಾ ಎಂದರೆ ಈ ವರ್ಷ ಲೀಸ್ ಗೆ ಪಡೆದುಕೊಂಡ ಬಗ್ಗೆ ದಾಖಲೆ ಕೊಡುತ್ತೇನೆ. ನಾನು ಆರೋಪಿಗೆ ಹಣ ಕೊಟ್ಟಿದ್ದೇನೆ ಎಂದದು ಹೇಳುವ ವರ್ಷದಲ್ಲಿ ನಾನು ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದೆ ಮತ್ತು ಅದರಿಂದ ಆದಾಯ ಹೊಂದಿದ್ದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಲು ಆಗುತ್ತದೆಯೇ ಎಂದರೆ ಇಲ್ಲ. LIC ಎಜೆಂಟ್ ಆಗಿ ನನಗೆ ಎಷ್ಟು ಆದಾಯ ಬರುತ್ತದೆ ಎಂಬ ಬಗ್ಗೆ ದಾಖಲೆ ಕೊಡುತ್ತೇನೆ. 2022-2023ನೇ ಸಾಲಿನಲ್ಲಿ ನನಗೆ LIC ಎಜೆಂಟ್ ಆಗಿ ಒಟ್ಟು 5 ಲಕ್ಷ ಆದಾಯ ಬಂದಿತ್ತು. ಆ ಬಗ್ಗೆ ದಾಖಲೆ ಹಾಜರುಪಡಿಸಬಲ್ಲೆ. ಸಾಕ್ಷಿ ಮುಂದದುವರಿದು ಅದೇ ವರ್ಷ 15 ಲಕ್ಷದ ಶುಂಠಿ ಬೆಳೆದಿದ್ದೇನೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆ ಇಲ್ಲ. ನಗದಾಗಿ ಹಣ ಕೊಟ್ಟಿದ್ದೇನೆ. ಸಾಕ್ಷಿ ಮುಂದುವರಿದು 10 ರಿಂದ 12 ಲಕ್ಷದಷ್ಟು ಆದಾಯ ಬರುವ ತಂಬಾಕು ಬೆಳೆದಿದ್ದೆ ಎಂದು ನುಡಿಯುತ್ತಾರೆ.

ನನ್ನ ಮತ್ತು ನನ್ನ ತಾಯಿಯ ಹೆಸರಿನಲ್ಲಿ ಜಂಟಿಯಾಗಿ ತಂಬಾಕು ಲೈಸೆನ್ಸ್ ಇದೆ . ತಂಬಾಕು ಮಾರಾಟ ಮಾಡಿದ ಬಗ್ಗೆ ಒಟ್ಟು ರೂ. 12 ಲಕ್ಷಕ್ಕೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಬಲ್ಲೆ. ನನಗೆ ಮೇಲೆ ಹೇಳಿದಂತೆ ಇತರೆ ಆದಾಯ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ. ನಾನು ಶೋರೂಮ್ ನಿಂದ ಟ್ರ್ಯಾಕ್ಟರ್ ಕೊಡಿಸುವಂತಹ ಮತ್ತು ಟ್ರ್ಯಾಕ್ಟರ್ ಮೇಲೆ ಸಾಲ ಬಾಕಿ ಇದ್ದಾಗ ಅದನ್ನು ಸೀಜ್ ಮಾಡಿಸಿ ಮಾರಾಟ ಮಾಡುವ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸೀಜ್ ಮಾಡಿಸಿ ಮಾರಾಟ ಮಾಡುತ್ತಿರಲಿಲ್ಲ, ಆದರೆ ಟ್ರ್ಯಾಕ್ಟರ್ ಶೋರೂಮ್ ನಲ್ಲಿ ಮಾರಾಟ ಮಾಡುವ ಕೆಲಸ ಮಾಡುತ್ತಿದ್ದೆ. ನಾನು ಸದರಿ ವ್ಯವಹಾರವನ್ನು ಈಗ ಮಾಡುತ್ತಿಲ್ಲ. ಹಿಂದೆ ಮಾಡುತ್ತಿದ್ದೆ.

2016-17ನೇ ಸಾಲಿನಲ್ಲಿ ನಾನು H.D.Kote ಶೋರೂಮ್ ನಿಂದ ಆರೋಪಿಗೆ ಮಹೇಂದ್ರ 475ರ ಟ್ರ್ಯಾಕ್ಟರ್ ಕೊಡಿಸಿದ್ದೆ ಎಂದರೆ ಕೊಡಿಸಿದ್ದೆ, ಆದರೆ H.D.Kote ಶೋರೂಮ್ ನಿಂದ ಅಲ್ಲ. ಆ ಸಮಯದಲ್ಲಿ ಆರೋಪಿ ರೂ. 2 ಲಕ್ಷ ಶೋರೂಮ್ ಗೆ Down payment ಮಾಡಿದ್ದರು ಎಂದರೆ ಸರಿಯಲ್ಲ. ಆ ದಿನದಂದು ಆರೋಪಿ ಖರೀದಿಸಿದ್ದ ಟ್ರ್ಯಾಕ್ಟರ್ ನ ಬೆಲೆ ರೂ.6,40,000/- ಇತ್ತು ಎಂದರೆ ಸರಿ. ಆರೋಪಿ H.D.Kote ಯ ಮಹೇಂದ್ರ ಫೈನಾನ್ಸ್

ನಿಂದ ರೂ. 4 ಲಕ್ಷ ಸಾಲ ಮಾಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಎಷ್ಟು ಸಾಲ ಮಾಡಿದ್ದರು ಎಂದು ಗೊತ್ತಿಲ್ಲ. ಆ ಸಂದರ್ಭದಲ್ಲಿ ಆರೋಪಿಯಿಂದ ಸಹಿ ಮಾಡಿದ ಒಟ್ಟು 4 ಚೆಕ್ಕುಗಳನ್ನು ಮಹೇಂದ್ರ ಫೈನಾನ್ಸ್ ರವರು ಪಡೆದುಕೊಂಡಿದ್ದರು ಎಂದರೆ ಸರಿ. ಟ್ರ್ಯಾಕ್ಟರ್ ನ ನೋಂದಣಿಯ ಖರ್ಚು ವೆಚ್ಚಕ್ಕಾಗಿ ರೂ.40 ಸಾವಿರ ಪಾವತಿಸಬೇಕಾಗಿತ್ತು ಎಂದರೆ ಅಷ್ಟು ಇರಲಿಲ್ಲ. ಆ 40 ಸಾವಿರ ಆರೋಪಿಯ ಬಳಿ ಇಲ್ಲದೇ ಇದ್ದ ಕಾರಣ ಮಹೀಂದ್ರ ಫೈನಾನ್ಸ್ ಗೆ ಕೊಡುತ್ತಿದ್ದ 4 ಚೆಕ್ಕುಗಳ ಜೊತೆಗೆ ಇನ್ನೊಂದು ಸಹಿ ಮಾಡಿದ ಖಾಲಿ ಚೆಕ್ಕನ್ನು ಟ್ರ್ಯಾಕ್ಟರ್ ನೋಂದಣಿಯ ಖರ್ಚಿಗಾಗಿ ನಾನು ಪಡೆದುಕೊಂಡಿದ್ದೆ ಎಂದರೆ ಇಲ್ಲ. ನಾನು ಆ ರೀತಿ ಆರೋಪಿಯಿಂದ ಒಟ್ಟು 5 ಚೆಕ್ಕುಗಳನ್ನು ಪಡೆದುಕೊಂಡಿದ್ದೆ ಎಂದರೆ ಇಲ್ಲ. ಯಾವುದೇ ಒಂದು ಫೈನಾನ್ಸ್ ನಲ್ಲಿ ಭದ್ರತೆಗಾಗಿ ಚೆಕ್ಕನ್ನು ಸ್ವೀಕರಿಸಿದಾಗ ಸಹಿ ಮಾಡಿದ ಖಾಲಿ ಚೆಕ್ಕನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಅದೇ ರೀತಿ ನಾನು 5 ಚೆಕ್ಕುಗಳಿಗೆ ಆರೋಪಿಯಿಂದ ಸಹಿ ಹಾಕಿಸಿ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. 2016-17ರಲ್ಲಿ ಆರೋಪಿ ಟ್ರ್ಯಾಕ್ಟರ್ ಖರೀದಿಸಿದ ನಂತರ ಒಂದು ವರ್ಷ ಫೈನಾನ್ಸ್ ಗೆ ಸಾಲದ ಕಂತನ್ನು ಕಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ ಟ್ರ್ಯಾಕ್ಟರ್ ನೋಂದಣಿಯಾಗಿ ಅದಕ್ಕೆ KA-45-T-9436 ಎಂಬ ನೋಂದಣಿ ಸಂಖ್ಯೆ ಸಿಕ್ಕಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದು ನನ್ನ ಕೆಲಸ ಆಗಿರಲಿಲ್ಲ. ಟ್ರ್ಯಾಕ್ಟರ್ ಕೊಡಿಸುವುದಷ್ಟೆ ನನ್ನ ಕೆಲಸವಾಗಿತ್ತು. ಯಾವುದೇ ಒಂದು ಟ್ರ್ಯಾಕ್ಟರ್ ಅನ್ನು ಕೊಡಿಸಿದಾಗ ಅದನ್ನು ನೋಂದಣಿ ಮಾಡಿಸುವ ಕರ್ತವ್ಯ ಶೊರೂಮ್ ನವರದ್ದು ಮತ್ತು ಮಧ್ಯವರ್ತಿಯದ್ದು ಆಗಿರುತ್ತದೆ ಎಂದರೆ ಸರಿಯಲ್ಲ.

ಆರೋಪಿ ಟ್ರ್ಯಾಕ್ಟರ್ ಖರೀದಿಸಿದ ಒಂದು ವರ್ಷದ ನಂತರ ಅದರ ಇಂಜಿನ್ ಹಲವಾರು ಬಾರಿ ರಿಪೇರಿಗೆ ಬಂತು ಎಂದರೆ ಅದಕ್ಕೂ ನನಗೂ ಸಂಬಂಧ ಇಲ್ಲ. ಆಗ ನಾನು ಆರೋಪಿಯ ಬಳಿ ಸದರಿ ಟ್ರ್ಯಾಕ್ಟರ್ ಅನ್ನು ಮಾರಾಟ ಮಾಡಿಸಿ ಹೊಸ ಟ್ರ್ಯಾಕ್ಟರ್ ಕೊಡಿಸುವುದಾಗಿ ಹೇಳಿ ಆರೋಪಿಯಿಂದ ಟ್ರ್ಯಾಕ್ಟರ್ ಅನ್ನು ಪಡೆದುಕೊಂಡು ಶೋರೂಮಿಗೆ ಕೊಡಿಸಿದೆ ಎಂದರೆ ಸರಿಯಲ್ಲ. ನಾನು ಸದರಿ ಟ್ರ್ಯಾಕ್ಟರ್ ಮತ್ತು ಅದರ ಎಲ್ಲಾ ಸಲಕರಣೆಗಳನ್ನು ಒಳಗೊಂಡಂತೆ ಒಟ್ಟು ರೂ.6,10,000/- ಕ್ಕೆ ಟ್ಯಾಕ್ಟರ್ ಅನ್ನು ಮಾರಾಟ ಮಾಡಿಸಿದೆ ಎಂದರೆ ಸರಿಯಲ್ಲ. ಸದರಿ ಟ್ರ್ಯಾಕ್ಟರ್ ಅನ್ನು ನಾನೇ ಮುಂದೆ ನಿಂತು ಮಾರಾಟ ಮಾಡಿಸಿದ್ದರೂ ಸಹ ನನಗೂ ಅದಕ್ಕೂ ಸಂಬಂಧ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೂ.6,10,000/- ಪೈಕಿ ರೂ. 3 ಲಕ್ಷವನ್ನು ನಾನು ಆರೋಪಿಗೆ ಹಿಂದಿರುಗಿದೆ ಎಂದರೆ ಸರಿಯಲ್ಲ. ನನಗೆ ಆ ಬಗ್ಗೆ ಗೊತ್ತಿಲ್ಲ. ಉಳಿಕೆ ರೂ.3,10,000/- ವನ್ನು ಟ್ರ್ಯಾಕ್ಟರ್ ನ ಹಿಂದಿನ ಸಾಲದ ಬಾಕಿಯನ್ನು ಪಾವತಿ ಮಾಡುವುದಾಗಿ ಹೇಳಿ ನಾನೇ ನನ್ನ ಬಳಿ ಉಳಿಸಿಕೊಂಡೆ ಎಂದರೆ ಸರಿಯಲ್ಲ. ಆ ರೀತಿ

ಉಳಿಸಿಕೊಂಡ ಹಣವನ್ನು ನಾನು ಫೈನಾನ್ಸ್‌ಗೆ ಪಾವತಿಸಲಿಲ್ಲ ಎಂದರೆ ಸರಿಯಲ್ಲ. ನಾನು ಫೈನಾನ್ಸ್‌ಗೆ ಬಾಕಿ ಪಾವತಿ ಮಾಡದೇ ಇರುವುದು ಗೊತ್ತಾಗಿ ಆರೋಪಿ ನನ್ನ ಬಳಿ ಬಂದು ಫೈನಾನ್ಸ್‌ಗೆ ಹಣ ಪಾವತಿಸಿ ಇಲ್ಲ ತನಗೆ ಕೊಡಿ ಎಂದು ನನ್ನನ್ನು ಒತ್ತಾಯಿಸಿದರು ಎಂದರೆ ಸರಿಯಲ್ಲ. ಆರೋಪಿ ಹಲವಾರು ಬಾರಿ ನನ್ನನ್ನು ಒತ್ತಾಯ ಮಾಡಿದ್ದರಿಂದ ಆರೋಪಿ ನನಗೆ ನೀಡಿದ್ದ 5 ಚೆಕ್ಕುಗಳ ಪೈಕಿ ಟ್ರ್ಯಾಕ್ಟರ್ ನೋಂದಣಿಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.